# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-36ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

**ಎಂದಿನಂತೆ ದಿನಾಂಕ: 01.10.2022 ರಂದು ಬೆಳಿಗ್ಗೆ 11.00 ಗಂಟೆಗೆ ಅಧ್ಯಕ್ಷರ ಆಗಮನದೊಂದಿಗೆ ವಾರ್ಡ್ ನಂ.36, ಛತ್ರಪತಿ ಶಿವಾಜಿ ವಾರ್ಡ್ ಸಮಿತಿ ಸಭೆಯನ್ನು ಗೊರಗುಂಟೆಪಾಳ್ಯ ಉಪವಿಭಾಗದಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು ಈ ಕೆಳಕಂಡಂತಿರುತ್ತದೆ.**

**ಸಭೆಗೆ ಹಾಜರಿದ್ದ ಅಧಿಕಾರಿಗಳು:-**

1. ಶ್ರೀಮತಿ.ಶಶಿಕಲಾ, ಸಹಾಯಕ ಕಂದಾಯ ಅಧಿಕಾರಿಗಳು ಹಾಗೂ ಅಧ್ಯಕ್ಷರು
2. ಶ್ರೀ.ಮಂಜುನಾಥ್.ಕೆ. ಸಹಾಯಕ ಅಭಿಯಂತರರು, ವಾರ್ಡ್ ನಂ.42.
3. ಶ್ರೀ. ಮಣಿಮೆಘಾಲ್ಯೆ, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.36.
4. ಶ್ರೀ. ನಾರಾಯಣ ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.36.
5. ಶ್ರೀ. ಕೆ. ಶಂಕರಪ್ಪ, ಆರ್.ಎಂ.ಸಿ.ಯಾರ್ಡ್ ಪೋಲೀಸ್
6. ಶ್ರೀ. ಮಂಜುನಾಥ, ಕಂದಾಯ ಪರಿವೀಕ್ಷಕರು ವಾರ್ಡ್ ನಂ.36.
7. ಶ್ರೀ. ದೇವರಾಜ್, ಮೇಲ್ವಿಚಾರಕರು, ವಾರ್ಡ್ ನಂ.42
8. ಶ್ರೀ.ಮುತ್ಯಾಲಪ್ಪ, ಮೇಲ್ವಿಚಾರಕರು, ವಾರ್ಡ್ ನಂ.36 ಎಸ್.ಡಬ್ಲ್ಯೂ.ಎಂ
9. ವಾರ್ಡ್ ಸಮಿತಿ ಸದಸ್ಯರನ್ನು ಆಯ್ಕೆ ಮಾಡಲು ಸೂಚಿಸಿರುತ್ತಾರೆ.

ಶ್ರೀಮತಿ.ಶಶಿಕಲಾ, ಸಹಾಯಕ ಕಂದಾಯ ಅಧಿಕಾರಿಗಳು, ಯಶವಂತಪುರ ಉಪ ವಲಯ ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು, ಸದಸ್ಯರನ್ನು ಸ್ವಾಗತಿಸುತ್ತ ಸಹಾಯಕ ಅಭಿಯಂತರರಾದ ಶ್ರೀ.ಮಂಜುನಾಥ ರವರು ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಿದರು.

ನಂಜುಂಡಪ್ಪರವರು ಮಾತನಾಡಿ ಸ್ಮಶಾನದ ಸುತ್ತ ಯಾವುದೇ ಬೇಲಿ ಇಲ್ಲದಿರುವ ಕಾರಣ ಸಾರ್ವಜನಿಕರು ಕಸ ಮತ್ತು ಡೆಬ್ರಿಸ್ ಹಾಕುತ್ತಾರೆ ಆದುದರಿಂದ ಕೂಡಲೇ ಸಂಭಂದಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ವಿನಂತಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಗೊರಗುಂಟೆಪಾಳ್ಯ ಉಪವಿಭಾಗ**

ಶ್ರೀ.ನಂಜುಂಡಪ್ಪ ರವರು ಮಾತನಾಡಿ ಸ್ಮಶಾನದ ಮುಂದಿರುವ ರಸ್ತೆಯಲ್ಲಿ ಗುಂಡಿಗಳು ಬಿದ್ದು ರಸ್ತೆ ದುಸ್ಥಿತಿಯಲ್ಲಿದ್ದು ವಾಹನ ಸಂಚಾರಕ್ಕೆ ಹಾಗೂ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗಿದ್ದು ಕೂಡಲೇ ಸಂಭಂದಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿದರು.

ಪು.ತಿ.ನೋ

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಗೊರಗುಂಟೆಪಾಳ್ಯ ಉಪವಿಭಾಗ**

ಮಧು, ವಾರ್ಡ್ ಸದಸ್ಯರು ಮಾತನಾಡಿ, ಗೊರಗುಂಟೆಪಾಳ್ಯ ಉಪವಿಭಾಗದ ಸ್ಮಶಾನದಲ್ಲಿ ಅಂ ಕ್ರೀಯೆ ಮಾಡಲು ಅಲ್ಲಿರುವ ಕೆಲಸಗಾರರು ತುಂಬಾ ಹಣವನ್ನು ಕೇಳುತ್ತಿದ್ದು ಬಡವರಿಗೆ ತುಂಬಾ ತೊಂದ ಉಂಟಾಗಿದೆ ಆದ್ದರಿಂದ ಸಂಭಂದಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿದರು.

ಲುಂಬಿನಿ ಕಾಲೋನಿಯ ರಸ್ತೆಗಳಲ್ಲಿ ತೀವ್ರ ಕಸ ಎಸೆಯುತ್ತಿರುವುದು ಹಾಗೂ ಸ್ನಾನದ ನೀರನ್ನು ರಸ್ತೆ ಬೀಡುತ್ತಿರುವ ಕಾರಣ ಅಲ್ಲಿ ಅನೈರ್ಮಲ್ಯ ವಾತಾವರಣ ಉಂಟಾಗಿದ್ದು ಸಂಬಂಧ ಪಟ್ಟ ಅಧಿಕಾರಿಗಳು ಸೂ ಕ್ರಮ ಕೈಗೊಳ್ಳಲು ತಿಳಿಸಿದರು.

**ಕ್ರಮ:- ಆರೋಗ್ಯ ಅಧಿಕಾರಿಗಳು ರಾ.ರಾ ನಗರ,**

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Manjunath. K

(ಶ್ರೀ. ಮಂಜುನಾಥ ಕೆ.)
ಸಹಾಯಕ ಅಭಿಯಂತರರು
ಮತ್ತು ಕಾರ್ಯದರ್ಶಿ
ವಾರ್ಡ್-42.

(ಶ್ರೀಮತಿ.ಶಶಿಕಲಾ)
ಸಹಾಯಕ ಕಂದಾಯ ಅಧಿಕಾರಿಗಳು
ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು